ಶ್ರೀ ಜಗದೀಶ್ ಶೆಟ್ಟರ್, ಕಂದಾಯ ಸಚಿವರು (ಮಾನ್ಯ ಡಿ. ಹೆಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಡಿ.ಹೆಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಸಚಿವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ , ಕಂದಾಯ ಸಚಿವರು (ಮಾನ್ಯ ಎಂ.ಪಿ. ಪ್ರಕಾಶ್, ಗೃಹ ಸಚಿವರ ಪರವಾಗಿ) : ಮಾನ್ಯ ಎಂ.ಪಿ. ಪ್ರಕಾಶ್, ಗೃಹ ಸಚಿವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್, ಕಂದಾಯ ಸಚಿವರು (ಮಾನ್ಯ ಉದಾಸಿ, ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ) ಮಾನ್ಯ ಉದಾಸಿ, ಗ್ರಾಮೀಣಾಭಿವೃದ್ಧಿ ಸಚಿವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

೫. ಅರ್ಜಿಗಳನ್ನೊಪ್ಪಿಸುವುದು

ಅಧ್ಯಕ್ಷರು : ಮಾನ್ಯ ಕೆ. ಪ್ರಭಾಕರ ಬಂಗೇರವರ ಹೆಸರಿನ ಮುಂದಿರುವ ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಕಂದಡ್ಕ ಹೊಳೆಗೆ ಪಾಲಡ್ಕ ಎಂಬಲ್ಲಿ ನೂತನ ಸೇತುವೆ ನಿರ್ಮಿಸಿ ಆ ಭಾಗದ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂಬ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

೬. ಹಕ್ಕುಚ್ಯುತಿ ಸೂಚನೆ :

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೇ ನಿಯಮ ೧೯೨ರ ಅಡಿಯಲ್ಲಿ ನಾನೊಂದು ನೋಟೀಸನ್ನು ಕೊಟ್ಟಿದ್ದೇನೆ. ಅದು ತಮಗೆ ಬಂದಿರಬೇಕೆಂದು ಅಂದುಕೊಂಡಿದ್ದೇನೆ. ನಮ್ಮ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ೩೧.೩.೨೦೦೭ ರಂದು ಜೈಪುರವೆಂಬ ಹೋಬಳಿ ಹೆಡ್ ಕ್ವಾಟ್ರಸ್ ಇದೆ. ಆ ಊರಿನಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಒಂದು ಸರ್ಕಾರಿ ಸಮಾರಂಭ. ಅಲ್ಲಿ ಪಿ.ಹೆಚ್. ಸಿ. ಆಸ್ಪತ್ರೆ ಇತ್ತು, ಅದನ್ನು ಈಗಿನ Health System ಕಾರ್ಯಕ್ರಮದ ಪ್ರಕಾರ upgrade ಮಾಡಿ ೩೦ ಹಾಸಿಗೆಗಳ ಆಸ್ಪತ್ರೆಯನ್ನು ಮಾಡಿದ್ದಾರೆ. ಅದಾದ ಮೇಲೆ ಆರೋಗ್ಯ ಇಲಾಖೆಯವರು ನನ್ನ ಹತ್ತಿರ ಇಲ್ಲಿ ಕಟ್ಟಡ ಕಟ್ಟಬೇಕಾಗುತ್ತದೆ ಆ ಕಟ್ಟಡದ ಶಂಕು ಸ್ಥಾಪನೆ ಕಾರ್ಯಕ್ರಮಗಕ್ಕೆ ನೀವು ಬರಬೇಕೆಂದು ನನ್ನನ್ನು ಕರೆದರು. ಅಲ್ಲಿನ health system ನಲ್ಲಿರುವ ಅಧಿಕಾರಿ ನಮ್ಮ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಅವರಿಬ್ಬರು ಬಂದು ನನ್ನನ್ನು ಕರೆದಿದ್ದರು. ವಿಧಾನಸಭೆ ನಡೆಯುತ್ತಿದೆ, ನಾನು ಶನಿವಾರ ಮೈಸೂರಿಗೆ ಬರುತ್ತೇನೆ. ಆದ್ದರಿಂದ ಶನಿವಾರ ಅಥವಾ ಭಾನುವಾರವಾದರೆ ಬರುತ್ತೇನೆಂದು ಹೇಳಿದ್ದೆ. ಆದ್ದರಿಂದ ಅವರುಗಳು ೩೧ನೇ ತಾರೀಖು ಆ ಕಟ್ಟಡಕ್ಕೆ ಅಡಿಗಲ್ಲನ್ನಾಕಿ ಪೂಜೆ ಮಾಡುವ ಕಾರ್ಯಕ್ರಮವನ್ನು ಏರ್ಪಾಟು ಮಾಡಿದ್ದರು. ೩೦ ಬೆಡ್‌ಗಳ ಆಸ್ಪತ್ರೆಯಾಗಬೇಕಾದರೆ ದೊಡ್ಡ ಕಟ್ಟಡ ಬೇಕಾಗುತ್ತದೆ. ಈಗ ಇರತಕ್ಕ ಪಿ.ಹೆಚ್. ಸಿ. ಯಲ್ಲಿ ಮಾಡಲು ಆಗುವುದಿಲ್ಲವೆಂದು ಅದಕ್ಕೆ ದುಡ್ಡು ಬಿಡುಗಡೆಯಾಗಿದೆ. ಅದಕ್ಕೆ ನಾನು ಹೋಗಿದ್ದೆ. ಅವರು ಸಂಬಂಧಪಟ್ಟವರನ್ನೆಲ್ಲರನ್ನೂ ಕರೆದಿದ್ದಾರೆ. ಆ ರೀತಿ ಕರೆಯಬೇಕಾದ್ದು ಅವರ ಜವಾಬ್ದಾರಿ, ಕರೆದಿದ್ದಾರೆ. ಅದು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಕಾರ್ಯಕ್ರಮ. ತಾಲ್ಲೂಕು ಮಟ್ಟದಲ್ಲಿ ಬರತಕ್ಕ ಆಸ್ಪತ್ರೆಗಳೆಲ್ಲವೂ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತವೆ. ಅವರು ಲಿಖಿತವಾಗಿ ಆಹ್ವಾನ ಪತ್ರಿಕೆಯನ್ನು ಮಾಡಿಸಿಲ್ಲ. Oral ಆಗಿ ಎಲ್ಲರನ್ನೂ ಕರೆದಿದ್ದಾರೆ. ವಿಧ್ಯುಕ್ತವಾಗಿ oral ನನಗೂ ಹಾಗೆಯೇ ಕರೆದಿದ್ದಾರೆ. ಬೇರೆಯವರಗೂ, ಸಂಬಂಧಪಟ್ಟವರಿಗೆಲ್ಲರಿಗೂ ಹಾಗೆಯೇ ಕರೆದಿದ್ದಾರೆ.